# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 214 |
| 2 | ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | : | 06.07.2023 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಪೊಲೀಸ್ ಇಲಾಖೆಯಲ್ಲಿ ಮಂಜೂರಾಗಿರುವ ಮತ್ತು ಹೊಸದಾಗಿ ಸೃಜಿಸಲಾಗಿರುವ ಒಟ್ಟು ಸಿ.ಪಿ.ಐ, ಎ.ಎಸ್.ಐ, ಹೆಚ್.ಸಿ ಹಾಗೂ ಪಿ.ಸಿ ಹುದ್ದೆಗಳ ಸಂಖ್ಯೆ ಎಷ್ಟು;</td><td>ಪೊಲೀಸ್ ಇಲಾಖೆಯಲ್ಲಿ ಸಿವಿಲ್, ಸಶಸ್ತ್ರ, ನಿಸ್ತಂತು, ರಿಸರ್ವ್, ಗುಪ್ತವಾರ್ತೆ, ಎಫ್‌ಪಿಬಿ ಮತ್ತು ಸಿಐಡಿ ಗಳಿಗೆ ಪ್ರತ್ಯೇಕ ವೃಂದದ ಹುದ್ದೆಗಳ ಮಂಜೂರಾತಿ ಇರುತ್ತದೆ. ಪ್ರಸ್ತುತ ಅಪೇಕ್ಷಿಸಿರುವ ಮಾಹಿತಿಯು ನಿರ್ದಿಷ್ಟ ವೃಂದವನ್ನು ಪ್ರಸ್ತಾಪಿಸಿದ ಪ್ರಯುಕ್ತ ಕಾನೂನು ಸುವ್ಯವಸ್ಥೆ, ಅಪರಾಧ ಮತ್ತು ಸಂಚಾರ ನಿಯಂತ್ರಣ ಕಾರ್ಯಗಳನ್ನು ನಿರ್ವಹಿಸುವ ಸಿವಿಲ್ ವೃಂದದ ಹುದ್ದೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗಿನಂತೆ ಒದಗಿಸಲಾಗಿದೆ.<br><br>ಪೊಲೀಸ್ ಇಲಾಖೆಯಲ್ಲಿ ಸಿವಿಲ್ ವೃಂದಕ್ಕೆ ಸಂಬಂಧಿಸಿದಂತೆ ಅಪೇಕ್ಷಿಸಿರುವ ಸಿಪಿಐ, ಪಿಎಸ್‌ಐ, ಎಎಸ್‌ಐ, ಸಿಹೆಚ್‌ಸಿ ಹಾಗೂ ಸಿಪಿಸಿ ವೃಂದಗಳಲ್ಲಿ ಮಂಜೂರಾಗಿರುವ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರಮ ಸಂ</th><th>ಹುದ್ದೆ</th><th>ಮಂಜೂರಾತಿ ಬಲ</th></tr>
<tr><td>1.</td><td>ಸಿಪಿಐ</td><td>1280</td></tr>
<tr><td>2.</td><td>ಪಿಎಸ್‌ಐ</td><td>3598</td></tr>
<tr><td>3.</td><td>ಎಎಸ್‌ಐ</td><td>5937</td></tr>
<tr><td>4.</td><td>ಸಿಹೆಚ್‌ಸಿ</td><td>17837</td></tr>
<tr><td>5.</td><td>ಸಿಪಿಸಿ</td><td>35257</td></tr>
</table>
ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಸೃಜಿಸಲಾಗಿರುವ ಸಿವಿಲ್ ವೃಂದದ ಸಿಪಿಐ, ಪಿಎಸ್‌ಐ, ಎಎಸ್‌ಐ, ಸಿಹೆಚ್‌ಸಿ ಹಾಗೂ ಸಿಪಿಸಿ ಹುದ್ದೆಗಳ ವಿವರವನ್ನು 'ಅನುಬಂಧ-ಅ' ರಲ್ಲಿ ನೀಡಲಾಗಿದೆ.</td></tr>
<tr><td>ಆ.</td><td>ಪ್ರಸ್ತುತ ಎಷ್ಟು ಹುದ್ದೆಗಳು ಖಾಲಿ ಇವೆ; ಹಾಗೂ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td><td>1. ಪೊಲೀಸ್ ಇಲಾಖೆಯಲ್ಲಿ ಸಿವಿಲ್ ವೃಂದಕ್ಕೆ ಸಂಬಂಧಿಸಿದಂತೆ ಸಿಪಿಐ, ಪಿಎಸ್‌ಐ, ಎಎಸ್‌ಐ, ಸಿಹೆಚ್‌ಸಿ ಹಾಗೂ ಸಿಪಿಸಿ ವೃಂದಗಳಲ್ಲಿ ಖಾಲಿಯಿರುವ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರಮ ಸಂ</th><th>ಹುದ್ದೆ</th><th>ರಿಕ್ತಸ್ಥಾನ</th></tr>
<tr><td>1.</td><td>ಸಿಪಿಐ</td><td>94</td></tr>
<tr><td>2.</td><td>ಪಿಎಸ್‌ಐ</td><td>816</td></tr>
<tr><td>3.</td><td>ಎಎಸ್‌ಐ</td><td>168</td></tr>
<tr><td>4.</td><td>ಸಿಹೆಚ್‌ಸಿ</td><td>308</td></tr>
<tr><td>5.</td><td>ಸಿಪಿಸಿ</td><td>3346</td></tr>
<tr><td colspan="2">ಒಟ್ಟು</td><td>4732</td></tr>
</table>
2. ಪ್ರಸ್ತುತ ಇಲಾಖೆಯಲ್ಲಿ 141 ಬ್ಯಾಕ್‌ಲಾಗ್ ಹುದ್ದೆಗಳು ಬಾಕಿಯಿದ್ದು, ಅದರಲ್ಲಿ 64 ಹುದ್ದೆಗಳ ನೇಮಕಾತಿ ಅಧಿಸೂಚನೆ ಈಗಾಗಲೇ ಹೊರಡಿಸಲಾಗಿದ್ದು, ಇನ್ನುಳಿದ ಹುದ್ದೆಗಳು ಸೇವಾನಿರತ ಸಿಪಿಸಿ ಹುದ್ದೆಗಳಾಗಿರುತ್ತವೆ. ಈ ಹುದ್ದೆಗಳಿಗೆ ಸಂಬಂಧಿಸಿದಂತೆ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿಯಲ್ಲಿ ಸೇವಾ ನಿರತ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಲಭ್ಯವಾಗದಿದ್ದಲ್ಲಿ ಆಯಾ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.</td></tr>
</table>

| | | |
|---|---|---|
| | | 3. ರಿಕ್ತವಿರುವ ಪಿಐ ಹುದ್ದೆಗಳಲ್ಲಿ ಡಿಟೆಕ್ಟಿವ್ ಇನ್ಸ್‌ಪೆಕ್ಟರ್ ಮತ್ತು ಮುಖ್ಯ ಗುಪ್ತಚರ ಅಧಿಕಾರಿ (ಪಿಐ ಇಂಟೆಲಿಜೆನ್ಸ್) ಹುದ್ದೆಗಳಿಗೆ ನಿಯುಕ್ತಿಗೊಂಡಿರುವ ಸಿವಿಲ್ ಇನ್ಸ್‌ಪೆಕ್ಟರ್ ಹಾಗೂ ಸ್ಥಳ ನಿಯುಕ್ತಿಗಾಗಿ ಕಾಯುತ್ತಿರುವ ಪಿಐ (ಸಿವಿಲ್) ರವರಿಗೆ ಸ್ಥಳ ನಿಯುಕ್ತಿಗೊಳಿಸಬೇಕಿರುತ್ತದೆ.<br><br>4. ಪಿಎಸ್‌ಐ ಹುದ್ದೆಗಳಿಗೆ ಈಗಾಗಲೇ ನೇಮಕಾತಿ ಅಧಿಸೂಚನೆ ಹೊರಡಿಸಿದ್ದು, ನೇಮಕಾತಿ ಅಕ್ರಮದ ಹಿನ್ನಲೆಯಲ್ಲಿ ನ್ಯಾಯಾಲಯದಲ್ಲಿ ಪ್ರಶ್ನಿತವಾಗಿರುವುದರಿಂದ ಹುದ್ದೆಗಳನ್ನು ಭರ್ತಿ ಮಾಡುವುದು ಬಾಕಿ ಉಳಿದಿರುತ್ತದೆ. ಅಲ್ಲದೆ, ಎಎಸ್‌ಐ ಮತ್ತು ಹೆಚ್‌ಸಿ ಮುಂಬಡ್ತಿ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

ಸಂಖ್ಯೆ: ಒಇ 235 ಪಿಇಎಂ 2023

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು

## ಅನುಬಂಧ–ಅ

| ಕ್ರ ಸಂ. | ವರ್ಷ | ವಿಷಯ | ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ | ಮಂಜೂರಾದ ಹುದ್ದೆಗಳು | | | | |
|---|---|---|---|---|---|---|---|---|
| | | | | ಸಿ.ಪಿ.ಐ. | ಪಿ.ಎಸ್.ಐ | ಎ.ಎಸ್.ಐ. | ಹೆಚ್.ಸಿ | ಪಿ.ಸಿ |
| 1. | 2020 | ಬೆಂಗಳೂರು ಜಿಲ್ಲೆಯ ಹೊಸಕೋಟೆ ಪಟ್ಟಣದ ಸಂಚಾರಿ ಪೊಲೀಸ್ ಠಾಣೆಗೆ ಹುದ್ದೆಗಳನ್ನು ಸೃಜನೆ ಮಾಡುವ ಬಗ್ಗೆ. | ಹೆಚ್‌ಡಿ/82/ಪಿಓಪಿ/2020 ದಿನಾಂಕ: 11.12.2020 | – | 01 | – | – | – |
| 2. | 2021 | ಚಿಕ್ಕಬಳ್ಳಾಪುರ ಜಿಲ್ಲೆಯ ಪೆರೇಸಂದ್ರ ಪೊಲೀಸ್ ಹೊರಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ. | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/14/ಪಿಓಪಿ/2021, ದಿನಾಂಕ: 08.03.2021 | | 01 | 02 | 06 | 17 |
| 3. | | ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಸರಸ್ವತಿನಗರದಲ್ಲಿ ಹೊಸ ಪೊಲೀಸ್ ಠಾಣೆ ತೆರೆಯಲು ಹುದ್ದೆಗಳನ್ನು ಸೃಜಿಸುವ ಸಂಬಂಧ ಆದೇಶ. | ಹೆಚ್‌ಡಿ/97/ಪಿಓಪಿ/2021, ದಿನಾಂಕ: 28.09.2021 | 01 | 02 | 01 | 21 | 37 |
| 4. | 2022 | ಹೊಸದಾಗಿ ಸೃಜಿಸಲಾದ ವಿಜಯನಗರ ಜಿಲ್ಲೆಗೆ ಹುದ್ದೆಗಳನ್ನು ಸೃಜಿಸುವ ಕುರಿತು. | ಹೆಚ್‌ಡಿ/91/ಪಿಓಪಿ/2021, ದಿನಾಂಕ: 13.01.2022 | 02 | 04 | 06 | 13 | 09 |
| 5. | | ವಿಜಯನಗರ ಜಿಲ್ಲೆಯ ರಾಜ್ಯ ಗುಪ್ತವಾರ್ತೆ ಘಟಕಕ್ಕೆ ಹೊಸ ಹುದ್ದೆಗಳನ್ನು ಸೃಜಿಸುವ ಕುರಿತು. | ಹೆಚ್‌ಡಿ/161/ಪಿಓಪಿ/2021, ದಿನಾಂಕ: 28.04.2022 | 01 | 02 | | | |
| 6. | | ಹೊಸದಾಗಿ ಸೃಜಿಸಲಾದ ವಿಜಯನಗರ ಜಿಲ್ಲೆಗೆ ಹುದ್ದೆಗಳನ್ನು ಸೃಜಿಸುವ ಕುರಿತು. | ಹೆಚ್‌ಡಿ/91/ಪಿಓಪಿ/2021 (ಭಾಗ–4), ದಿನಾಂಕ: 26.05.2022 | 02 | 03 | 04 | 09 | 03 |
| 7. | | ಪೊಲೀಸ್ ಇಲಾಖೆಯ ವಿವಿಧ ಘಟಕಗಳಿಗೆ ಒಟ್ಟು 25 ವಿವಿಧ ವೃಂದದ ಹುದ್ದೆಗಳನ್ನು ಮಂಜೂರು ಕುರಿತು. | ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/87/ಪಿಓಪಿ/2022, ದಿನಾಂಕ: 28.06.2022 | 03 | | | 03 | 05 |
| 8. | | ಹಾವೇರಿ ಜಿಲ್ಲೆ, ಶಿಗ್ಗಾಂವಿ ಪೊಲೀಸ್ ಠಾಣಾ ವ್ಯಾಪ್ತಿಯ ಹುಲಗೂರು ಗ್ರಾಮದಲ್ಲಿ ಪೊಲೀಸ್ ಠಾಣೆ ಸೃಜಿಸುವ ಬಗ್ಗೆ. | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/41/ಪಿಓಪಿ/2022, ದಿನಾಂಕ: 28.03.2022 ಮತ್ತು ದಿನಾಂಕ: 28.06.2022 | | 02 | 04 | 12 | 24 |
| 9. | | ರಾಜ್ಯ ಗುಪ್ತವಾರ್ತೆ ಘಟಕಕ್ಕೆ ತರಬೇತಿ ಅಕಾಡೆಮಿಯನ್ನು ಸ್ಥಾಪಿಸುವ ಬಗ್ಗೆ. | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/52/ಪಿಓಪಿ/2022, ದಿನಾಂಕ: 28.06.2022 ಹೆಚ್‌ಡಿ/52/ಪಿಓಪಿ/2022, ದಿನಾಂಕ: 08.07.2022 | 01 | 02 | | 06 | 18 |

..2

| | | | | | | | | |
|---|---|---|---|---|---|---|---|---|
| 10. | | ಭ್ರಷ್ಟಾಚಾರ ನಿಗ್ರಹ ದಳ ಸಂಸ್ಥೆಯಿಂದ ಪೊಲೀಸ್ ಅಧಿಕಾರಿಗಳು ಮತ್ತು ಸಹಾಯಕ ಸಿಬ್ಬಂದಿಗಳನ್ನು ಮರುಹಂಚಿಕೆ ಮಾಡುವ ಕುರಿತು. | ಸಿಆಸುಇ/64/ಎಸಿಬಿ/2022, ದಿ: 19.12.2022<br>ಹೆಚ್‌ಡಿ 135 ಪಿಓಪಿ 2022 (ಭಾಗ-2), ದಿನಾಂಕ: 15.12.2022. | 37 | | | 46 | 115 |